ದಿನಾಂಕಃ 19-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ-</u> ದರಖಾಸ್ತದಾರರ ಪರ ಶ್ರೀ ಎ ಎ ಜಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿವೆ. 2020 ರವರೆಗೆ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಮ್ಮ ಕುಟುಂಬದ ಹಿರಿತನ ನನ್ನ ಅಣ್ಣ ಮಾಡುತ್ತಿದ್ದರು. ನಮ್ಮ ಕುಟುಂಬದ ಆದಾಯಕ್ಕೆ ಸಂಬಂಧಪಟ್ಟಂತೆ ದಾಖಲೆ ಹಾಜರುಪಡಿಸಿಲ್ಲ. ಕುಟುಂಬಕ್ಕೆ ಅಡಚಣೆ ಇತ್ತೋ ಇಲ್ಲವೋ ಎಂದು ಕುಟುಂಬದ ಹಿರಿತನ ಮಾಡುವವರಿಗೆ ಗೊತ್ತಾಗುತ್ತದೆ ಹಾಗೂ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ದರಖಾಸ್ತದಾರ ಹಾಗೂ ಜೆಡಿಆರ್ ಮೀಲಾಪಿಯಾಗಿದ್ದರೆ ದರಖಾಸ್ತದಾರ ನಿಯೋಗಿ ಮುಖಾಂತರ ಖರೀದಿ ಪತ್ರ ಬರೆಸಿಕೊಳ್ಳುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ದರಖಾಸ್ತದಾರರೊಂದಿಗೆ ಮೀಲಾಪಿ ಆಗಿಲ್ಲ ಆದರೆ ಈಗ ನಮ್ಮ ಜೊತೆ ಮೀಲಾಪಿ ಆಗಿ ನಮಗೆ ಸಹಕಾರ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು, ನನ್ನ ಅಣ್ಣ ಹಾಗೂ ಸಹೋದರಿಯರು ಕೂಡಿಕೊಂಡು  ದರಖಾಸ್ತದಾರನಿಗೆ ಕಾಡಲು ಈ ಸುಳ್ಳು ಅರ್ಜಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದರಖಾಸ್ತದಾರರಿಗೆ ದಾವಾ ಆಸ್ತಿಯ ಬಗ್ಗೆ ಗೊತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಅರ್ಜಿಯ ಆಸ್ತಿಯಲ್ಲಿ ನನಗೆ ಹಿಸ್ಸೆ ಇಲ್ಲದಿದ್ದರೂ 1:7 ಹಿಸ್ಸೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅನುಕೂಲ ಆಗುವಂತೆ ನನ್ನ ಮುಖ್ಯ

ವಿಚಾರಣೆ ಪ್ರಮಾಣಪತ್ರ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಡ ಸಂಖ್ಯೆ 876 ಇದು 1962 ರಲ್ಲಿ ಆದೇಶ ಆಗಿದ್ದು ಅದರಲ್ಲಿ ನನ್ನ ಹೆಸರು ಇಲ್ಲ ಎಂದರೆ ನನ್ನ ತಂದೆಯ ಹೆಸರು ಇದೆ. ಈ ಡ ನನ್ನ ತಂದೆ ಹಾಗೂ ಸಹೋದರರ ನಡುವೆ ಹಿಸ್ಸೆ ಆದ ಬಗ್ಗೆ ಇರುತ್ತದೆ ಎಂದರೆ ಸರಿ. ನನ್ನ ತಂದೆ ಆಸ್ತಿಯಲ್ಲಿ ಅವರ ಹಾಗೂ ನನ್ನ ಸಹೋದರರ ನಡುವೆ ಹಿಸ್ಸೆ ಆಗಿರುತ್ತದೆ ಎಂದರೆ ಸರಿ.

ನಾನು ಹಾಜರುಪಡಿಸಿದ ಡಿಕ್ರಿ ಇತ್ತಿತ್ತಲಾಗಿ 2021 ರಲ್ಲಿ ಪಡೆಯಲಾಗಿದೆ ಎಂದರೆ ಅದು ಮೊದಲಿನಿಂದಲೂ ಇದೆ. ನಿಆರ್ 4, 2022 ರಲ್ಲಿ ಆದಂತಹ ಡಿಕ್ರಿ ಎಂದರೆ ಅದು ನನ್ನ ಸಹೋದರಿಯರು ದಾಖಲಿಸಿದ ದಾವೆ ಆಗಿರುತ್ತದೆ. ಆಸ್ತಿ ಹೋಗಬಾರದು ಎಂಬ ಉದ್ದೇಶದಿಂದ ನನ್ನ ಅಣ್ಣ ನನ್ನ ಮುಖಾಂತರ ಸುಳ್ಳು ಅರ್ಜಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)